

ಅದ್ಭುತವಾಗಿದೆ ಸಾರ್. ಮೂರಡಿ ಮೇಲೆ ಹಾರಿ ರಿಂಗಣ ಸುತ್ತುತ್ತ ಕಾಲಿಂದ ಒದೆಯೋದೆಂದರೇನು ಸಾಮಾನ್ಯವಾ? ಎನ್ನುತ್ತಿದ್ದರು ಕೆಲವರು. ಆದರೆ ಅದು ತಾನು ಹಾರಿದ್ದಲ್ಲ, ತನ್ನನ್ನು ಹಾರಿಸಿದ್ದು, ಎಲ್ಲವೂ ತಂತ್ರಜ್ಞಾನದ ಕೌಶಲ ಎಂದು ಈ ಮುಗ್ಧರಿಗೆ ಹೇಗೆ ಹೇಳುವುದು? ಆ ಸೀನಿನ ಚಿತ್ರೀಕರಣಕ್ಕೆ ಒಟ್ಟು ನಾಲ್ಕು ಗಂಟೆ ಹಿಡಿಯಿತು, ಹಾಗೂ ತಾನು ಕೈಕಾಲು ನೋವಿನಿಂದ ಬಳಲಿ ಒಂದು ವಾರ ವಿಶ್ರಾಂತಿ ಪಡೆಯಬೇಕಾಯಿತು! ಇದು ಹೇಳಿದರೆ ಅಭಿಮಾನಿಗಳಿಗೆ ಭ್ರಮ ನಿರಸನ ಆಗುತ್ತದೆ; ಕೆಲವು ಭ್ರಮೆಗಳನ್ನು ಹಾಗೆಯೇ ಬಿಡುವುದು ಒಳ್ಳೆಯದು.

ಈಗ ಹೇಳಹೊರಟ ಸಂದರ್ಭದಲ್ಲೂ ಚಾಲಕರು ಬಂದು ಸುತ್ತುವರಿದರು. ನಾನು ತಾನು ಎಂದು ಅವರ ನಡುವೆ ಜಗಳ ಸುರುವಾಯಿತು. ಈ ಬಾರಿ ಜಗಳ ಉಲ್ಬಣವಾಗಿ ಹೊಡೆದಾಟ ಬಡಿದಾಟಕ್ಕೆ ತಿರುಗಿತು. ನಟರಾಜನ ಸಮಾಧಾನದ ಮಾತು ಕೇಳುವವರೇ ಇರಲಿಲ್ಲ. ದೇವರಿಗಿಂತ ದೇವರ ನಾಮವೇ ಮುಖ್ಯವಾಯಿತು. ನಿಜವಾದ ನಟರಾಜನ ಎದುರೇ ಅವರು ತಮ್ಮ ಆರಾಧ್ಯ ದೇವತೆ ಶ್ರಾವಣ ನಟರಾಜನಿಗಾಗಿ ಹೊಡೆದಾಡುತ್ತಿದ್ದರು! ನಟರಾಜ ತಬ್ಬಿಬ್ಬಾದ. ಸಿನಿಮಾಗಳಲ್ಲಿ ಎಷ್ಟೋ ಮಂದಿಯನ್ನು ಒದ್ದು ನೆಲಕ್ಕೊರಗಿಸಿದ ನಾಯಕ ನಟ ಈಗ ನಿಷ್ಕ್ರಿಯನಾಗಿಬಿಟ್ಟ.

"ಹೌದು, ಸಿನಿಮಾ ಸ್ಟಂಟುಗಳಿಗಿಂತಲೂ ಈ ನಿಜವಾದ ವರಸೆಗಳು ನನಗೆ ಹೆಚ್ಚು ಆಕರ್ಷಕವಾಗಿ ಕಂಡವು. ನಾನು ಮಂತ್ರಮುಗ್ಧನಾಗಿಬಿಟ್ಟೆ. ಆಮೇಲೆ ಪೊಲೀಸ್ ವ್ಯಾನಿನ ಸೈರನಿಗೇ ನಾನು ಎಚ್ಚೆತ್ತುದು. ಆ ಸದ್ದಿಗೆ ಚಾಲಕರೆಲ್ಲ ಯಾವ ಮಾಯಕದಿಂದಲೋ ಎಂಬಂತೆ ತಂತಮ್ಮ ವಾಹನಗಳನ್ನೇರಿಕೊಂಡು ಅಲ್ಲಿಂದ ಪರಾರಿಯಾದರು.

ಪೊಲೀಸರು ಜೀಪಿನಿಂದಿಳಿದಾಗ ಅಲ್ಲಿ ಇಬ್ಬರು ಮಾತ್ರ ಸತ್ತು ಬಿದ್ದಿದ್ದರು.

"ಇಬ್ಬರು ಅಭಿಮಾನಿಗಳು!" ಎಂದೆ ನಾನು.

"ಅಲ್ಲ, ನಂತರ ತನಿಖೆಯಿಂದ ಗೊತ್ತಾದ್ದೆಂದರೆ ಧರಾಶಾಯಿಗಳಾದ ಆ ಇಬ್ಬರು ಜಗಳ ಬಿಡಿಸಲು ಬಂದವರಾಗಿದ್ದರು ಎನ್ನುವುದು!" ಎಂದ ನಟರಾಜ. "ಈಗ ನಾನು ನನ್ನ ಇಚ್ಛೆಗೆ ವಿರುದ್ಧವಾಗಿ ಕಾರೊಂದನ್ನು ಖರೀದಿಸಬೇಕಾಗಿದೆ."

✿